ಭದ್ರಾ ಅಭಯಾರಣ್ಯ ಪುನರ್ವಸತಿಗಾಗಿ ಬಿಡುಗಡೆಯಾದ ಜಮೀನು

2488 (3100) : ಶ್ರೀ ನೀಲಕಂಠ.ಬಿ.ಆರ್. (ತರೀಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಎಂ.ಸಿ.ಹಳ್ಳಿ ಗ್ರಾಮದಲ್ಲಿ ಭದ್ರಾ ಅಭಯಾರಣ್ಯ ಪುನರ್ವಸತಿಗಾತಿ ಬಿಡುಗಡೆಯಾಗಿರುವ ಜಮೀನು ಎಷ್ಟು; (ಪೂರ್ಣ ವಿವರಗಳನ್ನು ಫಲಾನುಭವಿಗಳ ವಿವರಗಳನ್ನು ಫಲಾನುಭವಿಗಳ ಹೆಸರಿನೊಂದಿಗೆ ನೀಡುವುದು)

ಆ) ಜಿಲ್ಲಾಧಿಕಾರಿಗಳು ನೇರವಾಗಿ ಹಕ್ಕು ಪತ್ರ ಕೊಡಲು ಕಾನೂನು ಇದೆಯೇ;

ಇ) ಈ ಹಕ್ಕು ಪತ್ರಗಳನ್ನು ತಹಶೀಲ್ದಾರೆ ಮೂಲಕ ನೀಡದೆ ಜಿಲ್ಲಾಧಿಕಾರಿಗಳು ಯಾವ ಕಾನೂನು ವ್ಯಾಪ್ತಿಯಲ್ಲಿ ನೀಡಿರುತ್ತಾರೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 621.00 ಎಕರೆ.

ಫಲಾನುಭವಿಗಳ ಹೆಸರು ಹಾಗೂ ಜಮೀನುನ ವಿವರಗಳನ್ನು ಪ್ರತ್ಯೇಕವಾಗಿ ಮಾನ್ಯ ಶಾಸಕರಿಗೆ ಕಿರುಹೊತ್ತಿಗೆಯಲ್ಲಿ ಒದಗಿಸಲಾಗುತ್ತದೆ.

ಆ) ಇಲ್ಲ.

ಇ) ಭದ್ರಾ ಅಭಯಾರಣ್ಯ ಪುನರ್ವಸತಿ ಯೋಜನೆಯಡಿ, ಸಂತ್ರಸ್ಥ ಕುಟುಂಬಗಳಿಗೆ ನಿರ್ಧಿಷ್ಟ ಮಿತಿಯಲ್ಲಿ ಜಮೀನು ಮಂಜೂರು ಮಾಡಲು ಅಚಕಾಶಗಳನ್ನು ಕಲ್ಪಿಸಿ ಸರ್ಕಾರವು ಆದೇಶ ಸಂ:ಆರ್‌ಡಿ 69 ಆರ್‌ಇಹೆಚ್ 97, ದಿನಾಂಕ: 28–3–2001ರ ಪ್ರಕಾರ ಮಂಜೂರಾತಿ ನೀಡಿರುತ್ತದೆ. ಈ ಆದೇಶದ ಮೇರೆಗೆ ವಿಶೇಷ ಸನ್ನಿವೇಶಕ್ಕನುಗುಣವಾಗಿ ದಾಖಲೆಗಳು ಮತ್ತು ಹಕ್ಕುಪತ್ರಗಳನ್ನು ತಯಾರಿಸಿ ಜಿಲ್ಲಾಧಿಕಾರಿಯವರ ಸಹಿಯೊಂದಿಗೆ ಸಂಬಂಧಪಟ್ಟ ಸಂತ್ರಸ್ಥರಿಗೆ ನೀಡಲಾಗಿರುತ್ತದೆ. 1969ರ ಭೂ ಮಂಜೂರಿ ನಿಯಮಗಳ ಮೇರೆಗೆ ವಿದ್ಯುಕ್ತ ಮಾರ್ಗಸೂಚಿಗಳನ್ನು ಅನುಸರಿಸಿ ಮಂಜೂರು ಮಾಡಿದ ಜಮೀನುಗಳಲ್ಲದರಿಂದ ಹಕ್ಕುಪತ್ರ ತಹಶೀಲ್ದಾರರ ಮೂಲಕ ನೀಡುವ ಅಗತ್ಯವಿರುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನ ಬಗರ್‌ಹುಕುಂ ಸಾಗುವಳಿದಾರರ ಖಾತಾ ಬದಲಾವಣೆ ಪ್ರಕ್ರಿಯೆ

2499 (3012) : ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಂದ ನಮೂನೆ 50 ಹಾಗೂ ನಮೂನೆ 53ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; ಹೋಬಳಿ ಹಾಗೂ ಗ್ರಾಮವಾರು ವಿವರಗಳನ್ನು ನೀಡುವುದು;

ಆ) ಸ್ವೀಕೃತವಾದ ಅರ್ಜಿಗಳ ವಿಲೇವಾರಿಯ ಪ್ರಗತಿಯ ವಿವರಗಳೇನು; ವಿಲೇವಾರಿಯಾಗದೆ ಉಳಿದಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕಾಲಮಿತಿಯನ್ನು ನಿಗದಿಗೊಳಿಸಲಾಗುವುದೇ;

ಇ) ಜಮೀನಿನ ಖಾತಾ ಬದಲಾವಣೆಗೆ ಕಂದಾಯ ಇಲಾಖೆಯು ನಿಗಧಿಗೊಳಿಸಿದ ಕಾಲಮಿತಿ ಎಷ್ಟು; ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಾವಿರಾರು ಇಂತಹ ಪ್ರಕರಣಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ ಶೀಘ್ರ ಖಾತಾ ಬದಲಾವಣೆಗಾಗಿ ಕೈಗೊಳ್ಳುವ ಕ್ರಮಗಳೇನು;

ಈ) ಖಾತಾ ಬದಲಾವಣೆ ಕಾರ್ಯವನ್ನು ಅತ್ಯಂತ ಶೀಘ್ರಗೊಳಿಸಲು ಇಲಾಖೆಯವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ)

	ನಮೂನೆ–50	ನಮೂನೆ–53
ಬೆಳ್ತಂಗಡಿ	7655	9315
ಕೊಕ್ಕಡ	11333	11043
ವೇಣೂರು	4982	6672
ಒಟ್ಟು	**23970**	**27030**

ಹೋಬಳಿ ಹಾಗೂ ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ)

ನಮೂನೆ	ಒಟ್ಟು ಅರ್ಜಿಗಳು	ಮಂಜೂರಾದ ಅರ್ಜಿಗಳು	ತಿರಸ್ಕೃತ	ಉಳಿಕೆ
50	23970	12,492	11,052	42.2
53	27030	2,302	4,597	20131

ದಿನಾಂಕ:31–3–2003ರ ವರೆವಿಗೆ ಗಡುವು ನೀಡಲಾಗಿತ್ತು. ಇದನ್ನು ಮತ್ತೆ ಒಂದು ವರ್ಷಕ್ಕೆ ವಿಸ್ತರಿಸಲು ಪರಿಶೀಲಿಸಲಾಗುತ್ತಿದೆ.

ಇ) ಕರ್ನಾಟಕ ಭೂ ಕಂದಾಯ ಕಾಯ್ದೆ ಅನ್ವಯ ಮ್ಯುಟೇಷನ್ ಮಾಡಲು ನಿಗಧಿ ಪಡಿಸಿರುವ ಕನಿಷ್ಟ ಅವಧಿ 30 ದಿನಗಳು.

ಹೌದು

ಈ) ನಿಗಧಿತ 30 ದಿನಗಳು ನಿರೀಕ್ಷಣಾ ಅವಧಿ ಇರುವುದುರಿಂದ ಪ್ರಕರಣಗಳು ಬಾಕಿ ಉಳಿಯುತ್ತವೆ. ಇದನ್ನು ತ್ವರಿತಗೊಳಿಸಲು ಮೊದಲು ಬಂದವಕ್ಕೆ ಮೊದಲು ಆಧ್ಯತೆ ಸೂತ್ರವನ್ನು ಭೂಮಿ ತತ್ತಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಂದಾಯ ನಿರೀಕ್ಷಕರು ಒಪ್ಪಿಗೆ ನೀಡದಿರುವ ಪ್ರಕರಣಗಳಲ್ಲಿ ಭೂಮಿ ತತ್ರಾಂಶದಲ್ಲಿ ಅಳವಡಿಸಲಾದ 50 ದಿನಗಳ ನಂತರ ಉಪ ತಹಶೀಲ್ದಾರರು ಅನುಮೋದಿಸುವ ಅಧಿಕಾರ ಹೊಂದಿರುತ್ತಾರೆ. ಅಲ್ಲದೇ ಮ್ಯುಟೇಷನ್ ಬಾಕಿ ಇರುವ ಪ್ರಕರಣಗಳ ವಿಮರ್ಷೆಗೆ ಗ್ರಾಮದ ಮಟ್ಟದಲ್ಲಿ ಗ್ರಾಮ ಪಂಚಾಯ್ತಿಯವರನ್ನು ತೊಡಗಿಸಲಾಗಿದೆ.

ಹೋಬಳಿ: ಬೆಳ್ತಂಗಡಿ

ಅನುಬಂಧ

ಕ್ರ.ಸಂ.	ಗ್ರಾಮ	ಸ್ವೀಕೃತ ಒಟ್ಟು ಅರ್ಜಿಗಳು	
		ನಮೂನೆ 50	ನಮೂನೆ 53
1	ಬೆಳ್ತಂಗಡಿ	208	213
2	ಕೊಯ್ಯೂರು	528	426
3	ಕುವೆಟ್ಟು	239	464
4	ಓಡಿಲ್ನಾಳ	274	387
5	ಮಾಲಾಡಿ	195	385
6	ಸೋಣಂದೂರು	92	182

1	2	3	4
7	ಪಡಂಗಡಿ	219	476
8	ಗರ್ಡಾಡಿ	213	522
9	ಮುಂಡೂರು	81	73
10	ಮೇಲಂತುಬೆಟ್ಟು	127	161
11	ಸವಣಾಲು	154	113
12	ಲೈಲ	440	615
13	ಉಜರೆ	809	1037
14	ನಡ	150	419
15	ನಾವೂರು	76	486
16	ಇಂದಬೆಟ್ಟು	417	407
17	ಕರ್ನಾಡಿ	288	276
18	ಕಡಿರುದ್ಯಾವರ	436	383
19	ಕಲ್ಮಂಜ	371	230
20	ಮಿತ್ತಬಾಗಿಲು	234	273
21	ಮಲವಂತಿಗೆ	317	287
22	ಚಾರ್ಮಾಡ	454	312
23	ತೋಟತ್ತಾಡಿ	459	400
24	ಮುಂಡಾಜೆ	287	254
25	ನೆರಿಯ	587	534
	ಒಟ್ಟು	7655	9315

ಹೋಬಳಿ: ಬೆಳ್ತಂಗಡಿ

ಅನುಬಂಧ

ಕ್ರ.ಸಂ.	ಗ್ರಾಮ	ಸ್ವೀಕೃತ ಒಟ್ಟು ಅರ್ಜಿಗಳು	
		ನಮೂನೆ 50	ನಮೂನೆ 53
1	ಕೊಕ್ಕಡ	599	655
2	ಪಟ್ರಮೆ	272	315
3	ಶಿಶಿಲ	307	117
4	ಶಿಬಾಜೆ	426	221
5	ಹತ್ಯಡ್ಕ	323	266
6	ರೆಖ್ಯ	347	334
7	ನಿಡ್ಲೆ	332	551
8	ಕಳಂಜ	885	582

1	2	3	4
9	ಪುದುಬೆಟ್ಟು	550	491
10	ಧರ್ಮಸ್ಥಳ	950	698
11	ಬೆಳಾಲು	633	409
12	ಚಿಬಿದ್ರೆ	321	286
13	ಇಳಂತಿಲ	538	547
14	ಮೊಗ್ರು	570	200
15	ಬಂಡಾರು	528	507
16	ಉರುವಾಲು	331	399
17	ಕರಾಯ	348	397
18	ತಣ್ಣೀರುಪಂತ	355	592
19	ತೆಕ್ಕಾರು	344	355
20	ಬಾರ್ಯ	339	473
21	ಪುತ್ತಿಲ	266	447
22	ಮಚ್ಚಿನ	327	718
23	ಕಣಿಯೂರು	496	559
24	ನ್ಯಾಯತರ್ಪು	172	159
25	ಕಳಿಯ	342	328
26	ಕುಕ್ಕಳ	195	169
27	ಪಾರೆಂಕಿ	230	268
	ಒಟ್ಟು	11333	11043

ಹೋಬಳಿ: ವೇಣೂರು

ಅನುಬಂಧ

ಕ್ರ.ಸಂ.	ಗ್ರಾಮ	ಸ್ವೀಕೃತ ಒಟ್ಟು ಅರ್ಜಿಗಳು	
		ನಮೂನೆ 50	ನಮೂನೆ 53
1	ಬಡಕೋಡಿ	99	193
2	ಹೊಸಂಗಡಿ	339	508
3	ಕಾಶಿಪಟ್ಟ	328	215
4	ಅರಂಬೋಡಿ	287	377
5	ಗುಂಡೂರಿ	80	155
6	ವೇಣೂರು	95	250
7	ಬಜಿರೆ	116	390
8	ಕರಿಮಣೇಲು	173	217

1	2	3	4
9	ಮೂಡುಕೋಡಿ	155	256
10	ಕುಕ್ಕೇಡಿ	250	238
11	ನಿಟ್ಟಡೆ	202	268
12	ಅಂಡಿಂಜೆ	196	304
13	ಸೌಮ್ಯ	86	131
14	ಕೊಕ್ರಾಡಿ	168	131
15	ಸುಲ್ಕೇರಿ	94	145
16	ಮರೋಡಿ	290	172
17	ಪೆರಾಡಿ	136	117
18	ನಾರಾವಿ	318	371
19	ಕುತ್ಲಾರು	132	136
20	ಸುರ್ಕೇರಿಮೊಗ್ರು	94	151
21	ಕರಂಬಾರಯ್ಯ	217	198
22	ಶಿರ್ಲಾಲು	256	352
23	ಬಡಗಕಾರಂದೂರು	123	205
24	ಪಿಲ್ಯ	95	189
25	ಕುದ್ಯಾಡಿ	76	101
26	ನಾವರ	100	135
27	ತೆಂಕಕಾರಂದೂರು	152	250
28	ಬಳಂಜ	165	297
29	ನಾಲ್ಕೂರು	160	230
	ಒಟ್ಟು	4962	6672
	ಮೂರು ಹೋಬಳಿಗಳ ಒಟ್ಟು	23970	27030

ರಾಜ್ಯದ ಬರಗಾಲ ಪರಿಸ್ಥಿತಿ ಬಗ್ಗೆ

2501 (3014) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 20 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಬಾರಿ ಬರಗಾಲ ಬಂದಿದೆ; ಕಳೆದ ಮೂರು ವರ್ಷದಿಂದ ಇದಕ್ಕಾಗಿ ಕೇಂದ್ರದಿಂದ ಬಿಡುಗಡೆ ಮಾಡಿದ ಹಣ ಎಷ್ಟು; ಹಾಗೂ ಬಿಡುಗಡೆ ಮಾಡಿದ ಆಹಾರ ಧಾನ್ಯವೆಷ್ಟು; ವರ್ಷವಾರು 3 ವರ್ಷಗಳ ವಿವರ ನೀಡುವುದು;

ಆ) 2002ನೇ ಸಾಲಿನಿಂದ ಇಲ್ಲಿಯವರೆಗೂ ರಾಜ್ಯವು ಬಿಡುಗಡೆ ಮಾಡಿದ ಆಹಾರ ಧಾನ್ಯವೆಷ್ಟು;

ಇ) ಕೇಂದ್ರ ಹಾಗೂ ರಾಜ್ಯದಿಂದ ಬಿಡುಗಡೆ ಮಾಡಿದ ಹಣದಲ್ಲಿ ಹಾಗೂ ಆಹಾರ ಧಾನ್ಯದಲ್ಲಿ ಇದುವರೆಗೂ ರಾಜ್ಯದಲ್ಲಿ ಬಿಡುಗಡೆ ಮಾಡಿದ, ಖರ್ಚು ಮಾಡಿದ ಹಣವೆಷ್ಟು; ವಿತರಣೆ ಮಾಡಿದ ಆಹಾರ ಧಾನ್ಯವೆಷ್ಟು; ತಾಲ್ಲೂಕುವಾರು ವಿವರ ನೀಡುವುದು?